Presented on : 05-11-2011
Registered on : 05-11-2011
Decided on : --
Duration :

**IN THE COURT OF IV ADDL. CIVIL JUDGE & JMFC**
**AT BELGAUM**
**(PRESENTED OVER BY SMT.VIJAYALAXMI.GHANAPUR)**

**O.S./0001402/2011**

**APPELLANTS**

1. KHUTEJABI W/O. ABDULSALAM CHONCHE
   SHAINAZ BUILDING PLOT NO. 59 7TH CROSS AZAMNAGAR BELGAUM.

VERSUS

**RESPONDENTS**

1. THE CITY CORPORATION BELGAUM.
   REPRESENTED BY ITS COMMISSIONER OFFICE AT SUBHASH NAGAR BELGAUM.
2. RAFIQ KHUTUBUDDIN INAMDAR
   4817/26 SUBHASH NAGAR BELGAUM.
3. SHAFI S/O. ABUDLMAJID DARGA
   H.NO 2517 MALI GALLI BELGAUM.
4. MOHAMMED ABDULMAJID DARGA
   -DO-
5. SHADAF S/O. ABDULMAJID DARGA
   -DO-
6. MUKADAR S/O. ABDULMAJID DARGA
   -DO-
7. SHIKANDAR S/O. ABDULMAJID DARGA
   -DO-
8. NAFEESA D/O. ABDULMAJID DARGA
   -DO-
9. MADINA D/O ABDULMAJID DARGA
   -DO-
10. SAMINA D/O. ABDULMAJID DARGA
    -DO-

---------------------------------------------------------------------------
G.G.PATIL, Advocate for the appellant.
---------------------------------------------------------------------------

## ORDER

ಪಾಟೀಸವಾಲು : ಶ್ರೀ ಆರ ಆಯ ಜಿ ವಾದಿ ಪರ ವಕೀಲರಿಂದ :

ನಿಪಿ-1 ರಂತೆ ಅಬ್ದುಲ್ಲ ಖಾದರ ಮತ್ತು ಮಹ್ಮದ ಸಾದೀಕ , ಅಸದಸಾಬ ಅವರ ಹೆಸರು ಕಡಿಮೆ ಮಾಡಿ ಅಬ್ದುಲ ಮಜೀದ ಖಾಜಿ ಇಮಾಮಸಾಬ ದರ್ಗಾ ಇವರ ಹೆಸರು ನಮೂದು ಆಗಿತ್ತು ಅಂದರೆ ನಿಜ. ನನಗೆ ದಾನ ಮಾಡುವ ಸಮಯದಲ್ಲಿ ದಾನ ಮಾಡಿದವರ ಹೆಸರುಗಳು ಉತಾರಗಳಲ್ಲಿ ಇರಲಿಲ್ಲ ಮತ್ತು ಅವರು ಮಾಲೀಕರು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಮೊದಲು ಮೂರು ಜನ ಮಾಲೀಕರು ಇದ್ದರು ಎಂದರೆ ಸರಿ. ನನಗೆ ದಾನ ಪತ್ರ ಕೇವಲ ಇಬ್ಬರೂ ಮಾತ್ರ ಮಾಡಿ ಕೊಟ್ಟಿದ್ದರು ಎಂದರೆ ನಿಜ. ದಾನ ಪತ್ರ ಮಾಡುವ ಸಮಯದಲ್ಲಿ ದಾವಾ ಆಸ್ತಿಗೆ ಮೂರು ಜನ ಮಾಲೀಕರು ಇದ್ದೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಡಿ ಡಿ ಎಲ ಆರ ಅವರು ಮಾಡಿದ ಆದೇಶದ ಪ್ರತಿಯನ್ನು ನಾನು ಹಾಜರು ಮಾಡಿಲ್ಲ ಸಾಕ್ಷಿಯು ಮುಂದುವರೆದು ಆ ಆದೇಶದ ವಿರುದ್ದ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಾನು ರೀಟ ಸಲ್ಲಿಸಿದ್ದೇನೆ. ಸದರಿ ಉಚ್ಚ ನ್ಯಾಯಾಲಯದಲ್ಲಿ ಡಿ ಡಿ ಎಲ ಆರ ಅವರು ಮಾಡಿದ ಆದೇಶವು ರದ್ದು ಮಾಡಿ ಮರು ವಿಚಾರಣೆಗೆ ಮರಳಿ ಕಳುಹಿಸಿದರು. ಡಿ ಡಿ ಎಲ ಆರ ಅವರು ಪುನಃ ವಿಚಾರಣೆಗೆ ಮಾಡಿ ಯಾವ ಆದೇಶವನ್ನು ನೀಡಿದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನಗೆ ನೋಟಿಸು ತಲುಪಿಲ್ಲ ಎಂದು ಹೇಳುತ್ತಾರೆ. ನಾನು ನೋಟಿಸು ಬರದಿದ್ದರೂ ಸಹ ಸ್ವತಃ ಡಿ ಡಿ ಎಲ ಆರ ಕಚೇರಿಗೆ 2000 ನೇ ಇಸ್ವಿಯಲ್ಲಿ ಹೋಗಿ ಚೌಕಸಿ ಮಾಡಿದ್ದೇನೆ. ಆ ಸಮಯದಲ್ಲಿ ದಾಖಲೆಗಳನ್ನು ನಾನು ನೋಡಿಲ್ಲ. ದಿನಾಂಕಃ 23-9-1999 ರಂದು ದಾವಾ ಉತಾರಗಳಲ್ಲಿ ನನ್ನ ಹೆಸರು ಕಡಿಮೆ ಮಾಡಿ ಮಹಾನಗರ ಪಾಲಿಕೆ ಹೆಸರು ನಮೂದು ಮಾಡಿದರು ಎಂದರೆ ನಿಜ. ಮಹಾನಗರ ಪಾಲಿಕೆ ವಿರುದ್ದ ನಾನು ಯಾವುದೇ ಕ್ರಮ ಕೈಕೊಂಡಿಲ್ಲ. ನಿಪಿ-2 ರಂತೆ ಇರುವ ಪಡಿತರ ಚೀಟಿಯನ್ನು 2008 ನೇ ಇಸ್ವಿಯಿಂದ ಇಲ್ಲಿಯವರೆಗೂ ಅದೇ ವಿಳಾಸ ಚಾಲ್ತಿಯಲ್ಲಿದೆ ಅಂದರೆ ನಿಜ. ನನ್ನ ಮೃತ ಪತ್ನಿ ಸಹ ನಿಪಿ-2 ರಂತೆ 2014 ನೇ ಇಸ್ವಿಯವರೆಗೂ ನನ್ನ ಜೊತೆಗೆ ಬಿಜಾಪೂರದಲ್ಲಿ ವಾಸವಾಗಿದ್ದರು ಎಂದರೆ ನಿಜ. ದಾನ ಪತ್ರ ಮಾಡುವ ಸಮಯದಲ್ಲಿ ಯಾವ ಬಣ್ಣದ ಹಾಳೆಯ ಮೇಲೆ ಮಾಡಲಾಗಿದೆಂದು ಮತ್ತು ಯಾವ ಪೇಪರ ಎಂದು ನನಗೆ ನೆನಪಿಲ್ಲ. ಮಹಾನಗರ ಪಾಲಿಕೆಯವರು ನಿಪಿ-4 ರಂತೆ 15 ಎಕರೆ ಜಮೀನನ್ನು ಸ್ವಾದೀನಪಡಿಸಿಕೊಂಡರು. ಸಾಕ್ಷಿಯು ಮುಂದುವರೆದು ಸದರಿ 23 ಎಕರೆ ಜಮೀನಿನಲ್ಲಿ 15 ಎಕರೆ ಸ್ವಾದೀನಪಡಿಸಿಕೊಂಡು ಮತ್ತೆ 8 ಎಕರೆ ಜಮೀನನ್ನು ಸ್ವಾದೀನಪಡಿಸಿಕೊಂಡಿರುವದಿಲ್ಲ. ದಾವಾ ಆಸ್ತಿ ಮಹಾನಗರ ಪಾಲಿಕೆಯವರು ಬಿಟ್ಟು ಕೊಟ್ಟ ಜಮೀನಿನಲ್ಲಿ

ಬರುತ್ತದೆ ಎಂದರೆ ನಿಜ. ಬಿಟ್ಟು ಕೊಟ್ಟ ಜಮೀನಿನಲ್ಲಿ ಅಂದಾಜು 65 ನಿವೇಶನಗಳು ಆಗಿದ್ದವು. ಆ 65 ಪ್ಲಾಟಗಳು ವಿಸ್ತೀರ್ಣ ಒಂದೇ ರೀತಿ ಇದೆಯೋ ಅಥವಾ ಬೇರೆ ರೀತಿ ಇದೆಯೋ ನನಗೆ ಗೊತ್ತಿಲ್ಲ. ದಾನ ಪಡೆದುಕೊಳ್ಳುವ ಸಮಯದಲ್ಲಿ ಮಹಾನಗರ ಪಾಲಿಕೆಯವರು ಸ್ವಾದೀನ ಮಾಡಿಕೊಂಡಿರುವ ಬಗ್ಗೆ ಅಥವಾ ಬಿಟ್ಟು ಕೊಟ್ಟಿರುವ ಜಮೀನಿನ ಬಗ್ಗೆ ಚೌಕಸಿ ಮಾಡಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನಮಗೆ ದಾನ ಮಾಡಿದ ಜಾಗೆ ಮಹಾನಗರ ಪಾಲಕೆಯವರು ಸ್ವಾದೀನ ಮಾಡಿಕೊಂಡಿಲ್ಲ ಅದನ್ನು ನೋಡಿಯೇ ದಾನ ಪಡೆದುಕೊಳ್ಳಲಾಗಿದೆ ಎಂದು ಹೇಳುತ್ತಾರೆ. ಮಹಾನಗರ ಪಾಲಿಕೆಯವರು ಸ್ವಾದೀನ ಪಡೆಯದೇ ಇದ್ದ ಜಮೀನಲ್ಲಿ ಸದರಿ ದಾನ ಪತ್ರ ಮಾಡಿಕೊಟ್ಟಿರುವ ವ್ಯಕ್ತಿಗಳ ಪಾಲಿಗೆ ಆ ಜಮೀನು ಬಂದಿಲ್ಲ ಎಂದರೆ ಸರಿಯಲ್ಲ. ಸ್ವಾದೀನ ಪಡೆಯುವ ಮೊದಲು ಮುಜಾವರ ಮನೆತನದವರು ತಮ್ಮ ಜಮೀನುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ್ವಲ್ಪ ಜಮೀನುಗಳನ್ನು ಮಾರಾಟ ಮಾಡಿರಬಹುದು ಎಂದು ಹೇಳುತ್ತಾರೆ. ಸದರಿ ಮಾರಾಟ ಮಾಡಿದ ಜಮೀನನ್ನೇ ಮಹಾನಗರ ಪಾಲಕೆಯವರು ಸ್ವಾದೀನ ಪಡೆದುಕೊಂಡು ಮಾರಾಟ ಮಾಡಿರುವ ವ್ಯಕ್ತಿಗಳಿಗೆ ಮರು ಮಂಜೂರು ಮಾಡಿದೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯುವನ್ನು ಕೋರಿದ ಕಾರಣ ಸಮಯವನ್ನು ನೀಡಿ ಮುಂದೂಡಲಾಯಿತು.

Sd/-
(SMT.VIJAYALAXMI.GHANAPUR)
IV ADDL. CIVIL JUDGE & JMFC
BELGAUM